ಓ.ಎಸ್.ನಂಃ 5/2021
ಡಿ.ಡಬ್ಲ್ಯೂಃ 1

<u>ದಿನಾಂಕಃ 07-08-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಂದುವರಿದ ಪಾಟೀ ಸವಾಲುಃ- ವಾದಿ ಪರ ವಕೀಲರಿಂದಃ-</u>

ದಿಃ15.07.2007 ರ ನೊಂದಾಯಿತ ವಿಭಾಗ ಪತ್ರಕ್ಕೆ ವಾದಿಯರು ಸಹಿಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-3 ವಿಭಾಗ ಪತ್ರಕ್ಕೆ ನಾವು ಅಣ್ಣ ತಮ್ಮಂದಿರ ನಡುವೆ ಮಾತ್ರ ಸದರಿ ದಾಖಲೆಯಾಗಿದ್ದು ನಾವು ಮಾತ್ರ ಸಹಿಯನ್ನು ಮಾಡಿದ್ದು ವಾದಿಯರು ಸಹಿಯನ್ನು ಮಾಡಿರುವುದಿಲ್ಲ ಎಂದರೆ ಸಾಕ್ಷಿದಾರರು ವಾದಿಯರ ಒಪ್ಪಿಗೆಯನ್ನು ನಾವು ಪಡೆದುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಈ ಬಗ್ಗೆ ಒಪ್ಪಿಗೆ ಪತ್ರ ಆಗಿರುತ್ತದೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ, ಆದರೆ ನನ್ನ ತಂದೆಯವರಿಗೆ ಗೊತ್ತಿರುತ್ತದೆ. ಸದರಿ ವಿಭಾಗ ಪತ್ರ ಆಗುವ ಸಮಯದಲ್ಲಿ ನನ್ನ ತಂದೆಯವರಿಗೆ ಸುಮಾರು 78 ವರ್ಷ ವಯಸ್ಸು ಆಗಿತ್ತು ಎಂದರೆ ಸರಿ. ಸದರಿ ವಿಭಾಗ ಪತ್ರಕ್ಕೆ ಯಾರೆಲ್ಲಾ ಸಹಿಯನ್ನು ಹಾಕಿರುತ್ತಾರೆ ಎಂದು ಇಂದಿನವರೆಗೂ ನಾನು ತಿಳಿದುಕೊಂಡಿರುವುದಿಲ್ಲ. ಸದರಿ ವಿಭಾಗ ಪತ್ರದ ಪ್ರಕಾರ ಖಾತೆಯನ್ನು ನಮ್ಮ ಹೆಸರಿಗೆ ಮಾಡಿಕೊಂಡಿರುತ್ತೇವೆ ಎಂದರೆ ಸರಿ.

ಸದರಿ ವಿಭಾಗ ಪತ್ರದಲ್ಲಿ 'ಜಿ' ಶೆಡ್ಯೂಲ್ ನನ್ನ ಹಿಸ್ಸೆಗೆ ಬಂದಂತಹ ಆಸ್ತಿ ಎಂದರೆ ಸರಿ. ಸದರಿ ಶೆಡ್ಯೂಲ್ ಪ್ರಕಾರ ನನಗೆ ಒಟ್ಟು 3 ಎಕರೆ 2 ಗುಂಟೆ ಆಸ್ತಿ ಬಂದಿರುತ್ತದೆ. ನನ್ನ ಅಣ್ಣ ತಮ್ಮಂದಿರಿಗೂ ಅಷ್ಟೇ ಜಮೀನು ಬಂದಿರುತ್ತದೆ ಎಂದರೆ ಸಾಕ್ಷಿದಾರರು ಖರಾಬು ಇದ್ದವರಿಗೆ ಸ್ವಲ್ಪ ಜಾಸ್ತಿ ಹಾಗೂ ಒಳ್ಳೆ ಜಮೀನು ಇದ್ದರೆ ಸ್ವಲ್ಪ ಕಡಿಮೆ ಪಾಲು ಬಂದಿರುತ್ತದೆ. ಹೆಣ್ಣು ಮಕ್ಕಳಿಗೆಂದು 2

ಎಕರೆ ಜಾಗವನ್ನು ವಿಭಾಗ ಪತ್ರದಲ್ಲಿ ತೋರಿಸಿರುತ್ತೇವೆ ಎಂದರೆ ಸರಿ. ಸದರಿ 2 ಎಕರೆಯನ್ನು ಹೆಣ್ಣು ಮಕ್ಕಳಿಗೆ ವಿಭಾಗ ಪತ್ರದಲ್ಲಿ ಬಿಟ್ಟಿರುವ ಬಗ್ಗೆ ಹೆಣ್ಣು ಮಕ್ಕಳಿಂದ ಒಪ್ಪಿಗೆ ಪತ್ರ ಪಡೆದುಕೊಂಡಿರುವುದಿಲ್ಲ. ಸದರಿ 2 ಎಕರೆ ಪಾಳು ಬಿದ್ದಿರುವ ಜಾಗ ಇದ್ದು ಅದನ್ನು ಹೆಣ್ಣು ಮಕ್ಕಳಿಗೆ ಹಾಗೂ ತಂದೆಗೆ ವಿಭಾಗ ಪತ್ರದಲ್ಲಿ ತೋರಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ 2 ಎಕರೆ ಜಮೀನು ಈಗಲೂ ಪಾಳು ಬಿದ್ದಿದ್ದು ಅದರಲ್ಲಿ ಯಾವುದೇ ಸಾಗುವಳಿ ಇರುವುದಿಲ್ಲ ಹಾಗೂ ಈಗಲೂ ಸದರಿ ಜಮೀನನ್ನು ಹೆಣ್ಣು ಮಕ್ಕಳಿಗೆ ಬಿಟ್ಟುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ಹೆಣ್ಣು ಮಕ್ಕಳ ಸಹಿಯನ್ನು ಪಡೆದುಕೊಂಡಿರುವುದಿಲ್ಲ ಹಾಗೂ ಅವರ ಹಿಸ್ಸೆಯನ್ನು ಅವರ ಪಾಲಿಗೆ ಬಿಟ್ಟುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ವಿಭಾಗ ಪತ್ರದಲ್ಲಿ ತೋರಿಸಿರುವ ನಮ್ಮ ಅಣ್ಣ ತಮ್ಮಂದಿರ ಜಾಗಗಳಲ್ಲಿ ಈಗ ಬೆಳೆಯನ್ನು ಬೆಳೆದಿರುತ್ತೇವೆ ಎಂದರೆ ಸಾಕ್ಷಿದಾರರು ಸ್ವಲ್ಪ ಸ್ವಲ್ಪ ಜಾಗದಲ್ಲಿ ಬೆಳೆಯನ್ನು ಬೆಳೆದಿರುತ್ತೇವೆ ಎಂದು ನುಡಿಯುತ್ತಾರೆ. ನಾವೆಲ್ಲಾ ಒಳ್ಳೆಯ ಜಾಗಗಳನ್ನು ನಮ್ಮ ಪಾಲಿಗೆ ಇಟ್ಟುಕೊಂಡು, ಹೆಣ್ಣು ಮಕ್ಕಳಿಗೆ ಮೋಸ ಮಾಡುವ ಉದ್ದೇಶದಿಂದ ಉಪಯೋಗವಿಲ್ಲದ ಕಡಿಮೆ ವಿಸ್ತೀರ್ಣದ ಜಾಗವನ್ನು ಹೆಣ್ಣು ಮಕ್ಕಳ ಹೆಸರಿಗೆ ನಾಮಕಾವಸ್ಥೆ ತೋರಿಸಿರುತ್ತೇವೆ ಎಂದರೆ ಸರಿಯಲ್ಲ. ಹೆಣ್ಣು ಮಕ್ಕಳಿಗೆ ಮೋಸ ಮಾಡುವ ಉದ್ದೇಶದಿಂದ ಸದರಿ ವಿಭಾಗ ಪತ್ರವನ್ನು ನಾವು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ವಾದಿಯರಿಗೆ ದಾವಾ ಆಸ್ತಿಯಲ್ಲಿ ಹಿಸ್ಸೆ ಇರುತ್ತದೆ ಎಂದರೆ ಸಾಕ್ಷಿದಾರರು ಅವರಿಗೂ ಪಾಲು ಬಿಟ್ಟಿರುತ್ತೇವೆ ಎಂದು ನುಡಿಯುತ್ತಾರೆ.

ಓ.ಎಸ್.ನಂಃ 5/2021
ಡಿ.ಡಬ್ಲ್ಯೂಃ 1

<u>ಪಾಟೀ ಸವಾಲುಃ- 6 ನೇ ಹಾಗೂ 18 ನೇ ಪ್ರತಿವಾದಿ ಪರ ವಕೀಲರಿಂದಃ-</u>

(6 ನೇ ಹಾಗೂ 18 ನೇ ಪ್ರತಿವಾದಿ ಪರ ವಕೀಲರನ್ನು ಕರೆಸಲಾಗಿ ಗೈರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು).

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ

ಓ.ಎಸ್.ನಂಃ 5/2021
ಡಿ.ಡಬ್ಲ್ಯೂಃ 1